ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ (7 ನೇ ನ್ಯಾಯಾಲಯ) ಮಂಗಳೂರು

ಸಿ.ಸಿ. ನಂಬ್ರ: 997/2022 ಸಿ.ಡಬ್ಲ್ಯೂ: 9 ಪಿ.ಡಬ್ಲ್ಯೂ:4

ಸಾಕ್ಷಿದಾರರ ಹೇಳಿಕೆ -

ಸಾಕ್ಷಿಯ ಹೆಸರು -ನಾಗೇಶ್

ತಂದೆಯ ಹೆಸರು - ಗೋಪಾಲ

ವಯಸ್ಸು - 25 ವರ್ಷ

ಉದ್ಯೋಗ - ಆರ್ಟಿಸ್ಟ್

ವಾಸ ಸ್ಥಳ - ನೀರುಮಾರ್ಗ ಮಂಗಳೂರು

ದಿ:16.01.2023 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಎ.ಪಿ.ಪಿ ಯವರಿಂದ

ಚಾಸಾ 3 ರವರ ಪರಿಚಯ ಇರುತ್ತದೆ ಹಾಗೂ ನ್ಯಾಯಾಲಯದಲ್ಲಿರುವ ಆರೋಪಿತರನ್ನು ನಾನು ನೋಡಿರುತ್ತೇನೆ. ಈ ಪ್ರಕರಣದ ಬಗ್ಗೆ ನನಗೇನು ಗೊತ್ತಿಲ್ಲ.

ಸಾಕ್ಷಿಯು ಈಗಾಗಲೇ ಗುರುತಿಸಲಾದ ನಿಪಿ- 5 ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ 5 (ಬಿ) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಸದರಿ ದಾಖಲೆಯಲ್ಲಿ ಬರೆದಿರುವ ವಿಷಯಗಳು ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿರುವುದಿಲ್ಲ . ಯಾವುದೇ ವಸ್ತುವನ್ನು ಅಮಾನತುಪಡಿಸಿಕೊಂಡಿರುವುದಿಲ್ಲ. ಪ್ರಕರಣದ ಯಾವುದೇ ವಸ್ತುಗಳನ್ನು ನೋಡಿದರೂ ಗುರುತಿಸಲಾಗುವುದಿಲ್ಲ.

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ , ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕು ಎಂದು ಮಾನ್ಯ ಎ.ಪಿ.ಪಿ ಯವರು ವಿನಂತಿಸಿಕೊಳ್ಳುತ್ತಾರೆ. ಸಾಕ್ಷಿಯು ಹೇಳಿಕೆಯನ್ನು ಪರಿಶೀಲಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲ್ಪಾತು)

ಪಾಟೀ ಸವಾಲು ಃ ಎ.ಪಿ.ಪಿ ಯವರಿಂದ

ದಿಃ 22.03.2022 ರಂದು ಚಾಸಾ 2 ರವರು ತೋರಿಸಿದ ತಕ್ಷೀರು ಸ್ಥಳದಲ್ಲಿ ಪೊಲೀಸರು ಬೆ. 10.00 ರಿಂದ 11.00 ಗಂಟೆವರೆಗೆ ನನ್ನ ಮತ್ತು ಚಾಸಾ 10 ರವರ ಸಮಕ್ಷಮ ಮಹಜರ್ ಮಾಡಿ ಮರದ ಕೋಲನ್ನು ಅಮಾನತುಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ನಾನು ಸ್ಥಳದಲ್ಲಿ ಸಹಿ ಮಾಡಿರುತ್ತೇನೆಂದರೆ ಸರಿಯಲ್ಲ.

ನಾನು ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃಆರೋಪಿತರ ಪರ ವಕೀಲರಿಂದಃ ಇಲ್ಲ
ಮರುವಿಚಾರಣೆ ಇರುವುದಿಲ್ಲ
**(ನನ್ನ ಉಕ್ತಲೇಖನದಂತೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲ್ಪಾತು.)**
ಓದಿ ಹೇಳಿ ಕೇಳಿ ಸರಿ ಇದೆ ಎಂದರು

**ಜೆ.ಎಂ.ಎಫ್.ಸಿ (7 ನೇ ನ್ಯಾಯಾಲಯ) ಮಂಗಳೂರು.**